| ಆರ್ ಎ | 14/2018 | ಪಿ.ಡಬ್ಲ್ಯೂ 1 |
|---|---|---|

ಇಂದು ದಿಃ 22.02.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ರಿಂದ 11 ಎದುರುದಾರರ ಪರ ಶ್ರೀ ಎನ್ ಎಂ ವಕೀಲರಿಂದ ಶ್ರೀ ಎಸ್ ಎ ಕೆ ವಕೀಲರ ಪರವಾಗಿಃ

ನಿ ಪಿ 32 ರಿಂದ 36 ದಾಖಲೆಗಳು ಮೊದಲೇ ನನ್ನ ಬಳಿ ಇದ್ದವು ಎಂದರೆ ಸರಿಯಲ್ಲ. ಅಲಿ ಉಲ್ಲಾ ಖಾನ್ ರವರು ಆಸ್ತಿಯನ್ನು ಪಾರ್ವತಮ್ಮರವರಿಂದ ಖರೀದಿಸಿದ್ದರು ಎಂದು ನಾನು ಹೇಳುತ್ತಿದ್ದೇನೆ ಎಂದರೆ ಸರಿ. ಅವರು ಖರೀದಿಸಿದ ಸ್ವತ್ತು ಸ.ನಂ.322/2 ಎ ಯಲ್ಲಿ 1 ಎಕರೆ 29 ಗುಂಟೆ ಆಗಿರುತ್ತದೆ. ಆ ಕಾಲಕ್ಕೆ ಪಾರ್ವತಮ್ಮನವರ ಬಳಿ ಮೇಲೆ ಹೇಳಿದ ಸ್ವತ್ತು ಅಲ್ಲದೇ ಬೇರೆ ಸ್ವತ್ತು ಇತ್ತಾ ಎಂದು ನನಗೆ ಗೊತ್ತಿಲ್ಲ. ದಿಃ 20.04.1970 ರಲ್ಲಿ ಅಲಿ ಉಲ್ಲಾ ಖಾನ್ ಹದ್ದು ಬಸ್ತು ಮತ್ತು 11 ಇ ಸ್ಕೆಚ್ ಮಾಡಿ ಆಸ್ತಿ ಖರೀದಿಸಿದ್ದರಾ ಎಂದರೆ ನನಗೆ ಗೊತ್ತಿಲ್ಲ. ನಾನು ದಿಃ 15.10.2011 ರಂದು ನಾನು ಅಲಿ ಉಲ್ಲಾ ಖಾನ್ ರವರಿಂದ ಆಸ್ತಿ ಖರೀದಿಸಿದಾಗ ಅದರ ಹದ್ದು ಬಸ್ತು ಮಾಡಿಸಿದ್ದೆನಾ ಎಂದರೆ ಸಾಕ್ಷಿಯು ಅಲಿ ಉಲ್ಲಾ ಖಾನ್ ರವರು ಅನ್ಯಕ್ರಾಂತ ಮಾಡಿಸಿ ನಮಗೆ ನಿವೇಶನವಾಗಿ ವಿಂಗಡಿಸಿ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ನಿವೇಶನ ಖರೀದಿಸುವಾಗ 11 ಇ ಸ್ಕೆಚ್ ಮತ್ತು ಹದ್ದು ಬಸ್ತು ಮಾಡಿಸಿ ಖರೀದಿಸಿದ್ದೆನಾ ಎಂದರೆ ಸಾಕ್ಷಿಯು ಭೂಪರಿವರ್ತನೆಗೊಂಡ ಆಸ್ತಿಗೆ 11 ಇ ಸ್ಕೆಚ್ ಬರುವುದಿಲ್ಲ ಎಂದು ನುಡಿಯುತ್ತಾರೆ. ಅಲಿ ಉಲ್ಲಾ ಖಾನ್ ರವರಿಂದ ನಿವೇಶನ ಖರೀದಿಸುವಾಗ ಅದರ ಸಂಬಂಧ ಏನಾದರೂ ದೂರುಗಳಿದ್ದ ಬಗ್ಗೆ ಅಲಿ ಉಲ್ಲಾ ಖಾನ್ ನನ್ನ ಗಮನಕ್ಕೆ ತಂದಿದ್ದರಾ ಎಂದರೆ ನನಗೆ ಗೊತ್ತಿಲ್ಲ. ಒ ಎಸ್ 11/1976 ರ ಪಕ್ಷಗಾರರು ಯಾರು ಎಂದು ನನಗೆ ಗೊತ್ತಿಲ್ಲ. ಒ ಎಸ್ 11/1976 ರ ಪಕ್ಷಗಾರರು ಯಾರು ಎಂದು ಜ್ಞಾಪಕ ಇಲ್ಲ.

ನಿ ಪಿ 34 ದಾಖಲೆಯನ್ನು ಸಾಕ್ಷಿದಾರರಿಗೆ ತೋರಿಸಿ ಸದರಿ ದಾವೆಯ ಪಕ್ಷಗಾರರ ಬಗ್ಗೆ ಕೇಳಿದಾಗ ಸಾಕ್ಷಿಯು ನಾನು ತಡೆಯಾಜ್ಞೆ ಬಗ್ಗೆ ಮಾತ್ರ ತಿಳಿದುಕೊಂಡಿದ್ದೇನೆ ಪಕ್ಷಗಾರರ ಬಗ್ಗೆ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಒ ಎಸ್ 11/1976 ರಲ್ಲಿ ಸ. ನಂ, 322/2 ಎ ಸ್ವತ್ತಿನ ಬಗ್ಗೆ ತಡೆಯಾಜ್ಞೆ ಪಡೆದುಕೊಂಡಿದ್ದರು. ನಿ ಪಿ 34 ರ ಪ್ರಕಾರ ಅಶೋಕಪುರಂ ವಾಸಿಗಳಾದ

ಬೆಟ್ಟಯ್ಯ ಬಿನ್ ನಂಜಯ್ಯ, ಚಾಮಯ್ಯ ಬಿನ್ ನಂಜಯ್ಯ, ದೊಡ್ಡೆತ್ತಯ್ಯ, ಚಿಕ್ಕೆತ್ತಯ್ಯ, ತೋಪಯ್ಯ ಪ್ರತಿವಾದಿಗಳು ಎಂದರೆ ಸರಿ. ಒ ಎಸ್ 383/2012 ಹಾಗೂ ಈ ಮೇಲ್ಮನವಿಯಲ್ಲಿ ಮೇಲೆ ಹೇಳಿದ ಪ್ರತಿವಾದಿಗಳು ಪಕ್ಷಗಾರರಲ್ಲ. ಒ ಎಸ್ 11/1976 ಅನ್ನು ಅಲಿ ಉಲ್ಲಾ ಖಾನ್ ಇಡೀ ಅಶೋಕಪುರಂ ವಾಸಿಗಳಿಂದ ತೊಂದರೆ ಆಗುತ್ತಿದೆ ಎಂದು ಪ್ರಾತಿನಿಧಿಕ ರೂಪದ ದಾವೆಯಾಗಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ನಿ ಪಿ 34 ರ ಖಂಡಿಕೆ 4 ರಲ್ಲಿ ಅಲಿ ಉಲ್ಲಾ ಖಾನ್ ರವರು ಪ್ರತಿವಾದಿಗಳು ಅಥವಾ ಇಡೀ ಅಶೋಕಪುರಂನ ವಾಸಿಗಳು ದಾವಾ ಸ್ವತ್ತಿನ ಸ್ವಾಧೀನಕ್ಕೆ ಸಂಬಂಧಪಟ್ಟವರಲ್ಲ ಎಂದು ಉಲ್ಲೇಖಿಸಿದ್ದರು ಎಂದರೆ ಸಾಕ್ಷಿಯು ಮೊದಲು ತಿಳಿದುಕೊಂಡಿರಲಿಲ್ಲ ಈಗ ವಕೀಲರು ಹೇಳಿದ ನಂತರ ತಿಳಿಯಿತು ಎಂದು ನುಡಿಯುತ್ತಾರೆ. ನಿ ಪಿ 34 ರ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ. ಸ.ನಂ. 322/2 ಎ ಯಬಗ್ಗೆ ಒ ಎಸ್ 11/1976 ರಲ್ಲಿ ಅಲಿ ಉಲ್ಲಾ ಖಾನ್ ರವರ ಮುಖ್ಯ ವಿಚಾರಣೆ ಮತ್ತು ತೀರ್ಪಿನಲ್ಲಿ ಉಲ್ಲೇಖವಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿ ಪಿ 33 ರಲ್ಲಿ ಖಂಡಿಕೆ 2 ರಲ್ಲಿ ಸ.ನಂ. ಉಲ್ಲೇಖವಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ತೀರ್ಪಿನಲ್ಲಿ ಇದೆ ಎಂದು ನುಡಿಯುತ್ತಾರೆ. ಒ ಎಸ್ 11/1976 ರ ತೀರ್ಪಿನ ಖಂಡಿಕೆ 9 ರಲ್ಲಿ ಸ.ನಂ. ಉಲ್ಲೇಖ ಆಗಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಇಲ್ಲದಿದ್ದರೂ ತೀರ್ಪಿನಲ್ಲಿ ಬೇರೆ ಕಡೆ ಉಲ್ಲೇಖಿಸಿದ್ದಾರೆ ಎಂದು ನುಡಿಯುತ್ತಾರೆ. ನಿ ಪಿ 35 ತೀರ್ಪಿನಲ್ಲಿ ನಿ ಪಿ 2 ಎಂದು ತೋರಿಸಿರುವುದು endorsement ಆಗಿದ್ದು ಅಲ್ಲೂ ಸ.ನಂ. ಅಥವಾ ಹದ್ದುಬಸ್ತು ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿ ಪಿ 31 ರಿಂದ 36 ದಾಖಲೆಗಳಿಗೂ ಈ ಮೇಲ್ಮನವಿಗೂ ಸಂಬಂಧ ಇಲ್ಲ ಎಂದರೆ ಸಂಬಂಧ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಒ ಎಸ್ 11/1976 ರಲ್ಲಿ ಹಾಜರು ಮಾಡಿದ ನಿ ಪಿ 1 ರಿಂದ 5 ದಾಖಲೆ ಗಳನ್ನು ಈ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ನನಗೆ ಏನು ಸೂಕ್ತವೋ ಅದನ್ನು ಹಾಜರು ಮಾಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

| | | |
|---|---|---|
| ಆರ್ ಎ | 14/2018 | ಪಿ.ಡಬ್ಲ್ಯೂ 1 |

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.